ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 06-09-2016

## ಪತ್ರಿಕಾ ಪ್ರಕಟಣೆ

# ಕರ್ನಾಟಕದಲ್ಲಿರುವ ಹೋಂಸ್ಟೇಗಳ ನೋಂದಣಿ ಪೋರ್ಟಲ್ ಅನಾವರಣ

ಬೆಂಗಳೂರು ಸೆಪ್ಟೆಂಬರ್ 6 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯು ಕರ್ನಾಟಕದಲ್ಲಿರುವ ಹೋಂಸ್ಟೇಗಳನ್ನು ಆನ್‌ಲೈನ್ ನೋಂದಣಿ ಮಾಡಲು ಸಾಧ್ಯವಾಗುವಂತೆ ಹೊಸದಾಗಿ **www.karnatakatourism.org** ನಲ್ಲಿ ಆನ್‌ಲೈನ್ ಪೋರ್ಟಲ್‌ನ್ನು ಅನಾವರಣಗೊಳಿಸಿದೆ. ಈ ನೋಂದಣಿ ಪ್ರಕ್ರಿಯೆಯನ್ನು ಕಡ್ಡಾಯಗೊಳಿಸುವುದರೊಂದಿಗೆ ಸರಳೀಕರಣಗೊಳಿಸುವುದು ಮತ್ತು ಪ್ರವಾಸಿಗರಿಗೆ ಸ್ಥಳೀಯ ವಾತಾವರಣದ ಅನುಭವವನ್ನು ನಿರ್ಮಿಸುವುದರೊಂದಿಗೆ ಕೈಗೆಟುಕುವ ಹಾಗೂ ಉತ್ತಮ ಗುಣಮಟ್ಟದ ಸೌಲಭ್ಯಗಳನ್ನು ಒದಗಿಸುವುದು ಇದರ ಪ್ರಮುಖ ಉದ್ದೇಶವಾಗಿರುತ್ತದೆ.

ಸ್ವದೇಶಿ ಹಾಗೂ ವಿದೇಶಿ ಪ್ರವಾಸಿಗರು ಒಳಗೊಂಡಂತೆ ಸ್ಥಳೀಯ ಸಂಸ್ಕೃತಿ, ಪರಂಪರೆ, ಊಟೋಪಚಾರ, ವಸತಿ ಸೌಕರ್ಯಗಳನ್ನು ಮನೆಯ ವಾತಾವರಣದಲ್ಲಿ ಅತೀ ಶುದ್ಧ ಮತ್ತು ಕೈಗೆಟಕುವ ದರದಲ್ಲಿ ಒದಗಿಸುವುದು ಹೋಂಸ್ಟೇಗಳ ಉದ್ದೇಶವಾಗಿದೆ. ಉತ್ತಮ ಗುಣಮಟ್ಟದ ಮನೆಗಳು ಮತ್ತು ಹೋಂಸ್ಟೇ ನಡೆಸುವ ಮನೋಭಾವ ಹೊಂದಿದ ಮನೆಯ ಮಾಲೀಕರು ಈ ಚಟುವಟಿಕೆಗಳನ್ನು ಪ್ರಾರಂಭಿಸಲು ಹಾಗೂ ಹೆಚ್ಚುವರಿ ಆದಾಯಗಳಿಸಲು ಈ ಪ್ರಕ್ರಿಯೆಯು ಪೂರಕವಾಗಿರುವುದು. 2015-2020 ರ ಪ್ರವಾಸೋದ್ಯಮ ನೀತಿಯಡಿ ಹೋಂಸ್ಟೇ ನಡೆಸುವುದಕ್ಕೆ ಬೇಕಾಗಿರುವ

ಅರ್ಹತೆಗಳ ಬಗ್ಗೆ ಈಗಾಗಲೇ ವಿವರಗಳನ್ನು ಇಲಾಖೆಯ www.karnatakatourism.org ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಆನ್‌ಲೈನ್‌ನಲ್ಲಿ ನೊಂದಣಿ ಮಾಡಿಸುವ ಪ್ರಕ್ರಿಯೆಯು ಸರಳವಾಗಿದ್ದು, ಹೋಂಸ್ಟೇ ಭಾವಚಿತ್ರಗಳು, ಮಾಲೀಕರ ಭಾವಚಿತ್ರ, ಮಾಲೀಕತ್ವದ ದಾಖಲಾತಿ, ಹೋಂಸ್ಟೇನಲ್ಲಿ ಒದಗಿಸಿರುವ ವ್ಯವಸ್ಥೆಗಳು, ಹೋಂಸ್ಟೇಗೆ ತಗಲುವ ಬಾಡಿಗೆ, ಸ್ಥಳೀಯ ಸಂಸ್ಥೆಯ ಪರವಾನಗಿ, ಪೊಲೀಸ್ ಇಲಾಖೆಯ ನಿರಾಪೇಕ್ಷಣೆಯ ಪತ್ರ ಮತ್ತಿತರೆ ವಿವರಗಳನ್ನು ನಮೂದಿಸಿ ಸ್ವಯಂ ಘೋಷಣೆಯೊಂದಿಗೆ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಪ್ರವಾಸಿಗರ ಸುರಕ್ಷತೆಯ ಹಾಗೂ ಗುಣಮಟ್ಟದ ಸೇವೆಯನ್ನು ಒದಗಿಸುವ ದೃಷ್ಠಿಯಿಂದ ಪ್ರವಾಸೋದ್ಯಮ ಇಲಾಖೆಯು ಹೋಂಸ್ಟೇಗಳ ನೊಂದಣಿಯನ್ನು ಕಡ್ಡಾಯಗೊಳಿಸಿದೆ. ನೋಂದಣಿ ಕುರಿತು ವಿವರವಾದ ಮಾರ್ಗಸೂಚಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಒದಗಿಸಿದ್ದು, ಎಲ್ಲಾ ಹೋಂಸ್ಟೇ ಮಾಲೀಕರು, ಸ್ವಯಂ ಘೋಷಣೆಯೊಂದಿಗೆ ನವೆಂಬರ್ 15 ರ ಒಳಗಾಗಿ ನೋಂದಣಿ ಮಾಡಿಕೊಳ್ಳತಕ್ಕದ್ದು.

ಈ ಹಿಂದೆ ಹಲವು ಬಾರಿ ಸರ್ಕಾರದಿಂದ ಜ್ಞಾಪನೆಗಳನ್ನು ಹೊರಡಿಸಿದರೂ ಸಾಕಷ್ಟು ಜನರು ಹೋಂಸ್ಟೇಗಳಿಗೆ ನೋಂದಣಿ ಮಾಡಿಸದೇ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ರೀತಿ ನಿಯಮಾವಳಿಗಳು ಇದ್ದರೂ ನಿಯಮಾವಳಿಗಳನ್ನು ಉಲ್ಲಂಘಿಸಿ ಕೆಲವು ಹೋಂಸ್ಟೇಗಳು ತಮ್ಮ ಚಟುವಟಿಕೆಗಳನ್ನು ನಡೆಸುತ್ತಿರುವುದನ್ನೂ ಸಹ ಗಮನಿಸಲಾಗಿದೆ.

ದಿನಾಂಕ: 15–11–2016 ರ ಒಳಗೆ ಹೋಂಸ್ಟೇ ನೋಂದಣಿ ಮಾಡಿಸದೇ ನಡೆಸುವ ಮಾಲೀಕರನ್ನು ಕಾನೂನು ವ್ಯಾಪ್ತಿಗೆ ಒಳಪಡಿಸಲು ಸೂಕ್ತಕ್ರಮ ಕೈಗೊಳ್ಳಲಾಗುವುದು. ರಾಜ್ಯದಲ್ಲಿ ಪ್ರವಾಸಿಗರಿಗೆ ಉತ್ತಮ, ಸುರಕ್ಷಿತ ಹೋಂಸ್ಟೇ ವಾತಾವರಣ ನಿರ್ಮಿಸುವ ಉದ್ದೇಶ ಸರ್ಕಾರ ಹೊಂದಿದ್ದು, ಈ ನಿಟ್ಟಿನಲ್ಲಿ ಸರ್ಕಾರದೊಂದಿಗೆ ಸಹಕರಿಸಲು ರಾಜ್ಯದಲ್ಲಿರುವ ಎಲ್ಲಾ ಹೋಂಸ್ಟೇ ಮಾಲೀಕರನ್ನು ಕೋರಲಾಗಿದೆ.

ಬಾಬು:ಜಿಪಿಆರ್

## ಹವಾಮಾನ ಬದಲಾವಣೆ ಕೋಶ : ಸ್ಪರ್ಧೆಗಳು

ಬೆಂಗಳೂರು ಸೆಪ್ಟೆಂಬರ್ 6 (ಕರ್ನಾಟಕ ವಾರ್ತೆ)

**ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯು ಸ್ವಾಯತ್ತ ಸಂಸ್ಥೆಯಾಗಿದ್ದು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಂಸ್ಥೆಯು ಪರಿಸರ ಸಂರಕ್ಷಣೆ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ಸಂಶೋಧನೆಗಳನ್ನು ಹಾಗೂ ಅಧ್ಯಯನಗಳನ್ನು ಕೈಗೊಳ್ಳಲಾಗುವುದಲ್ಲದೆ, ಇಲಾಖೆಯ ಅಧಿಕಾರಿಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ ಹಾಗೂ ಜನಪ್ರತಿಧಿಗಳಿಗೆ ಪರಿಸರಕ್ಕೆ ಪೂರಕವಾಗುವ ವಿಷಯಗಳ ಕುರಿತು ತರಬೇತಿಗಳನ್ನು ಆಯೋಜಿಸುತ್ತಿದೆ.**

**ಸಂಸ್ಥೆಯಲ್ಲಿ "ಹವಾಮಾನ ಬದಲಾವಣೆ"ಯ ಕೋಶವನ್ನು ತೆರೆಯಲು ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು, ಈ ಕೋಶವು 2015–16 ರಿಂದ ಕಾರ್ಯಾರಂಭ ಮಾಡಿದೆ. ಹವಾಮಾನ ಬದಲಾವಣೆ ಕೋಶದ ಮೂಲಕ ಸಂಸ್ಥೆಯು ವಿವಿಧ ಸರ್ಕಾರಿ ಇಲಾಖೆಗಳಿಗೆ ಹಾಗೂ ಸರ್ಕಾರೇತರ ಸಂಸ್ಥೆಗಳಿಗೆ ಹವಾಮಾನ ಬದಲಾವಣೆ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ, ಉಪಶಮನಗೊಳಿಸಲು ತಾಂತ್ರಿಕ ನೆರವನ್ನು ಸಹ ನೀಡುತ್ತದೆ. ಹವಾಮಾನ ಬದಲಾವಣೆ ಕುರಿತು ನಾಗರೀಕ ಸಮಾಜಕ್ಕೆ ಸಂದೇಶವನ್ನು ನೀಡುವ ಅಗತ್ಯತೆ ಪ್ರಸಕ್ತ ಸನ್ನಿವೇಶದಲ್ಲಿ ಅತ್ಯಾವಶ್ಯಕವಾಗಿದ್ದು, ಈ ಕುರಿತು ಶಾಲಾ ಮಕ್ಕಳ ಮೂಲಕ ಸಮುದಾಯಕ್ಕೆ, ಸಮಾಜಕ್ಕೆ ಹಾಗೂ ನಾಗರೀಕ ಸಂಸ್ಥೆಗಳಿಗೆ ಪರಿಣಾಮಕಾರಿಯಾಗಿ ಅರಿವು ಮೂಡಿಸುವ ಸಲುವಾಗಿ ರಸಪ್ರಶ್ನೆ ಕಾರ್ಯಕ್ರಮವನ್ನು ದೂರದರ್ಶನ ವಾಹಿನಿಯಲ್ಲಿ ಪ್ರಸಾರವಾಗುವ "ಥಟ್ ಅಂಥ ಹೇಳಿ" ಕಾರ್ಯಕ್ರಮದಡಿಯಲ್ಲಿ ಹಮ್ಮಿಕೊಳ್ಳಲು ಯೋಜಿಸಲಾಗಿದೆ.**

ಎಂಪ್ರಿ ಸಂಸ್ಥೆಯ ಕೋರಿಕೆಯಂತೆ ಲಿಖಿತ ಪರೀಕ್ಷೆಗಾಗಿ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಗಳಿಂದ 10ನೇ ತರಗತಿಯ 456 ವಿದ್ಯಾರ್ಥಿಗಳ ಪಟ್ಟಿಯನ್ನು ಕಳುಹಿಸಿದ್ದಾರೆ. ಈ ವಿದ್ಯಾರ್ಥಿಗಳಿಗೆ ದಿನಾಂಕ: 07–08–2016 ರಂದು ಲಿಖಿತ ಪರೀಕ್ಷೆಯನ್ನು ಮಾಡಲಾಗಿದ್ದು, ಈ ಪೈಕಿ ರಸಪ್ರಶ್ನೆ ಕಾರ್ಯಕ್ರಮಕ್ಕೆ ಗರಿಷ್ಠ ಅಂಕಗಳಿಸಿದ 36+ ಕಾಯ್ದಿರಿಸಿ ಪಟ್ಟಿಯ 4 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಆಯ್ಕೆಯಾದ 40 ವಿದ್ಯಾರ್ಥಿಗಳಿಗೆ ಎಂಪ್ರಿ ಸಂಸ್ಥೆಯು, ಹವಾಮಾನ ಬದಲಾವಣೆ ಕುರಿತ ರಸಪ್ರಶ್ನೆ ಕಾರ್ಯಕ್ರಮಗಳನ್ನು ದೂರದರ್ಶನದ ಸಹಯೋಗದೊಂದಿಗೆ, ಮಾಡಲಾಗುತ್ತಿದೆ. ಹವಾಮಾನ ಬದಲಾವಣೆ "ಥಟ್ ಅಂಥ ಹೇಳಿ" ರಸಪ್ರಶ್ನೆ ಕಾರ್ಯಕ್ರಮವು ಸೆಪ್ಟೆಂಬರ್ 30, 2016 ರವರೆಗೆ (ಸೋಮವಾರದಿಂದ ಶುಕ್ರವಾರದವರೆಗೆ) ರಾತ್ರಿ 9–30 ರಿಂದ 10–00 ಗಂಟೆಯವರೆಗೆ ದೂರದರ್ಶನದ ಚಂದನ ವಾಹಿನಿಯಲ್ಲಿ

ಪ್ರಸಾರವಾಗುತ್ತದೆ. ಕಾರ್ಯಕ್ರಮದ ಮರುಪ್ರಸಾರವು ಮರುದಿನ ಬೆಳಿಗ್ಗೆ 11-00 ರಿಂದ 11-30 ಗಂಟೆಯವರೆಗೆ ಹಾಗೂ ಶುಕ್ರವಾರ ಸಾಯಂಕಾಲ ಪ್ರಸಾರವಾದ ಕಾರ್ಯಕ್ರಮ ಮಾತ್ರ ಸೋಮವಾರ ಬೆಳಿಗ್ಗೆ ಮರು ಪ್ರಸಾರವಾಗುತ್ತದೆ. ರಸಪ್ರಶ್ನೆ ಕಾರ್ಯಕ್ರಮವು ಹವಾಮಾನ ಬದಲಾವಣೆ ಕುರಿತ ಉಪಯುಕ್ತ ಕಾರ್ಯಕ್ರಮವಾಗಿದ್ದು, ಗರಿಷ್ಠ ಪ್ರಮಾಣದಲ್ಲಿ ವಿದ್ಯಾರ್ಥಿಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕೆನ್ನುವ ಉದ್ದೇಶದಿಂದ ಆಯೋಜಿಸಲಾಗುತ್ತಿದೆ.

ರಸಪ್ರಶ್ನೆ ಕಾರ್ಯಕ್ರಮವು 4 ಹಂತಗಳಲ್ಲಿ, ಒಟ್ಟು 20 ಸುತ್ತುಗಳಲ್ಲಿ ಜರುಗಲಿದೆ. ಪ್ರತಿ ಹಂತದಲ್ಲಿ ಸರಿ ಉತ್ತರವನ್ನು ನೀಡುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಪುಸ್ತಕ ರೂಪದಲ್ಲಿ ಬಹುಮಾನ ನೀಡಲಾಗುವುದು ಹಾಗೂ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಪ್ರಮಾಣ ಪ್ರತ ನೀಡಲಾಗುವುದು. ಅಂತಿಮ ಹಂತದಲ್ಲಿ ವಿಜೇತ ಮೊದಲ ವಿದ್ಯಾರ್ಥಿಗೆ ಎಂಪ್ರಿ ಸಂಸ್ಥೆಯ ವತಿಯಿಂದ ಮೊದಲನೆಯ ಬಹುಮಾನವಾಗಿ ರೂ. 5,000/- ಮತ್ತು ಎರಡನೆಯ ಬಹುಮಾನವಾಗಿ ರೂ. 3,000/- ನಗದು ನೀಡಲಾಗುವುದು.

ಬಾಬು:ಜಿಪಿಆರ್.

## ಸುವರ್ಣ ರಥದಲ್ಲಿ ನಾಡ ಹಬ್ಬಕ್ಕೆ 'ಮೈಸೂರು ದಸರಾ' ದ ವಿನೂತನ ಅನುಭವ

**ಬೆಂಗಳೂರು ಸೆಪ್ಟೆಂಬರ್ 6 (ಕರ್ನಾಟಕ ವಾರ್ತೆ)**

**ಪ್ರವಾಸೋದ್ಯಮ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ (ಕೆ.ಎಸ್.ಟಿ.ಡಿ.ಸಿ) ಸಂಯುಕ್ತ ಆಶ್ರಯದಲ್ಲಿ ಅಕ್ಟೋಬರ್ 1 ರಿಂದ 10 ರವರೆಗೆ ಜಗದ್ವಿಖ್ಯಾತ ಮೈಸೂರು ದಸರಾ ಹಬ್ಬದ ಸಂಭ್ರಮವನ್ನು ಸುವರ್ಣ ರಥದ (Golden Chariot Luxury Train) ಮೂಲಕ ಸವಿಯಲು ವಿಶೇಷ ಪ್ಯಾಕೇಜ್ ಆಯೋಜಿಸಲಾಗಿದೆ. ಪ್ರವಾಸದ ದರವನ್ನು ಅತ್ಯಂತ ಆಕರ್ಷಕ ಹಾಗೂ ಸ್ಪರ್ಧಾತ್ಮಕ ರೀತಿಯಲ್ಲಿ ಆಯೋಜಿಸಿದ್ದು, 2 ರಾತ್ರಿ ಮತ್ತು 1 ದಿನದ ಪ್ಯಾಕೇಜ್‌ಗೆ ಒಬ್ಬ ವ್ಯಕ್ತಿಗೆ ರೂ. 30,000/- ಗಳನ್ನು ನಿಗದಿಪಡಿಸಲಾಗಿದೆ. ಈ ಪ್ರವಾಸವು ಅಕ್ಟೋಬರ್ 1 ರಿಂದ ಬೆಂಗಳೂರಿನ ಯಶವಂತಪುರ ರೈಲ್ವೆ ನಿಲ್ದಾಣದಿಂದ ಚಾಲನೆಗೊಂಡ ದಿನ ಬಿಟ್ಟು ದಿನ ಅಂದರೆ, ಅಕ್ಟೋಬರ್ 3, 5, 7 ಮತ್ತು 9 ರ ದಿನಾಂಕಗಳಂದು ಆಯೋಜಿಸಲಾಗಿದೆ.**

ಸುವರ್ಣ ರಥದಲ್ಲಿ ಒಟ್ಟು 44 ಐಷಾರಾಮಿ ಕ್ಯಾಬಿನ್‌ಗಳಿದ್ದು, 88 ಪ್ರವಾಸಿಗರಿಗೆ ಪ್ರಯಾಣಿಸಲು ಅವಕಾಶವಿರುತ್ತದೆ. ಸೀಟುಗಳನ್ನು ವೆಬ್‌ಸೈಟ್ **www.goldenchariot.org** ನಲ್ಲಿ ಆನ್‌ಲೈನ್ ಮುಖಾಂತರ ಕಾಯ್ದಿರಿಸಬಹುದಾಗಿದೆ. ಪ್ರವಾಸಿಗರು ಸೀಟುಗಳನ್ನು **Bookmyshow & Makemytrip** ಮೂಲಕವೂ ಕಾಯ್ದಿರಿಸಬಹುದಾಗಿದೆ.

ಈ ರೈಲಿನಲ್ಲಿ ಪ್ರಯಾಣಿಸುವ ಪ್ರವಾಸಿಗರಿಗೆ ಪಂಚತಾರ ಸೌಲಭ್ಯಗಳೊಂದಿಗೆ ಮೈಸೂರು ದಸರಾ ಹಬ್ಬದ ವಿಭಿನ್ನ ಅನುಭವ ದೊರಕುವುದು. ಪ್ರವಾಸ ಹೊರಡುವ ದಿನ ಎಲ್ಲಾ ಅತಿಥಿಗಳು ಬೆಂಗಳೂರಿನ 'ತಾಜ್ ವೆಸ್ಟ್ ಎಂಡ್' ಹೋಟೆಲಿನಲ್ಲಿ ಬಂದು ಸೇರಿ ಹೈ ಟೀ ನಂತರ ಯಶವಂತಪುರಕ್ಕೆ ಅವರನ್ನು ಕರೆದುಕೊಂಡು ಹೋಗಲಾಗುವುದು. ಅಲ್ಲಿ ಅವರಿಗೆ ಮೈಸೂರು ಶೈಲಿ ಸಾಂಪ್ರದಾಯಿಕ ಸ್ವಾಗತ ನೀಡಿ ಸುವರ್ಣ ರಥಕ್ಕೆ ಆಹ್ವಾನಿಸಲಾಗುವುದು.

ದಕ್ಷಿಣ ಭಾರತದ ಏಕೈಕ ಐಷಾರಾಮಿ ರೈಲು ಎನಿಸಿರುವ ಸುವರ್ಣ ರಥವು ವಿಶೇಷವಾಗಿ ವಿನ್ಯಾಸಗೊಳಿಸಿದ 18 ಕೋಚ್‌ಗಳನ್ನು ಒಳಗೊಂಡಿದೆ. ಅದರಲ್ಲಿ ಸುಂದರವಾಗಿ ಅಲಂಕಾರಗೊಂಡ ಎರಡು ರೆಸ್ಟೋರೆಂಟ್ ಇದ್ದು, ಅತಿಥಿಗಳಿಗೆ ವಿಭಿನ್ನ ತಿಂಡಿ-ತಿನಿಸುಗಳ ಮೂಲಕ ರಸದೌತಣ ನೀಡಲಿದೆ. ಹಾಗೆಯೇ ಈ ರೈಲಿನಲ್ಲಿ ಆಕರ್ಷಕವಾಗಿ ವಿನ್ಯಾಸಗೊಳಿಸಿದ ಬಾರ್, ಜಿಮ್ ಮತ್ತು ಸ್ಪಾ ಸೌಲಭ್ಯಗಳಿರುತ್ತವೆ. ರಾತ್ರಿ ಯಶವಂತಪುರದಿಂದ ಹೊರಡುವ ರೈಲು ಮೈಸೂರು ತಲುಪುತ್ತದೆ. ಮರುದಿನ ಬೆಳಿಗ್ಗೆ ಗೋಲ್ಡನ್ ಚಾರಿಯೇಟ್ ರೈಲಿನಲ್ಲಿ ಬೆಳಗಿನ ಉಪಹಾರ ನಂತರ ಅತಿಥಿಗಳನ್ನು ಕೆ.ಎಸ್.ಟಿ.ಡಿ.ಸಿ. ಲಕ್ಷುರಿ ಬಸ್ಸುಗಳಲ್ಲಿ ಕರೆದೊಯ್ದು ಶ್ರೀರಂಗಪಟ್ಟಣದ ಪಾರಂಪರಿಕ ಸ್ಮಾರಕಗಳಾದ ದರಿಯಾ ದೌಲತ್, ಟಿಪ್ಪು ಸಮಾಧಿ ಮತ್ತು ಕೋಟೆಗಳನ್ನು ಪರಿಚಯಿಸಿ ವಾಪಸ್ಸು ಮೈಸೂರಿಗೆ ಕರೆದುಕೊಂಡು ಬರಲಾಗುವುದು.

ಮೈಸೂರಿನಲ್ಲಿ ಪ್ರಸಿದ್ಧ ಜಗನ್ಮೋಹನ ಅರಮನೆಯ ಭೇಟಿ ಮುಗಿಸಿ ಲಲಿತ ಮಹಲ್ ಪ್ಯಾಲೇಸ್‌ನಲ್ಲಿ ಮಧ್ಯಾಹ್ನದ ಭೂರಿ ಭೋಜನದೊಂದಿಗೆ ಸತ್ಕರಿಸಲಾಗುವುದು. ನಂತರ ಜಾನಪದ ಸಂಗ್ರಹಾಲಯ, ಜಯಲಕ್ಷ್ಮಿ ವಿಲಾಸ್ ಮ್ಯಾನಷನ್ ಮತ್ತು ಮೈಸೂರು ವಿಶ್ವವಿದ್ಯಾಲಯದ ಶತಮಾನೋತ್ಸವ ಗಡಿಯಾರ ಗೋಪುರವನ್ನು ವೀಕ್ಷಿಸಿ, ಸಂಜೆ ಸುಪ್ರಸಿದ್ಧ ಮೈಸೂರು ಅರಮನೆಗೆ ಕೊಂಡೊಯ್ಯಲಾಗುವುದು.

ಕೆ.ಎಸ್.ಟಿ.ಡಿ.ಸಿ. ಯು ಮೈಸೂರಿನ ಪ್ರಸಿದ್ದ ಮೈಸೂರು ರಾಯಲ್ "ವಾಕ್ಸ್" ಸಹಯೋಗದೊಂದಿಗೆ ಪಾರಂಪರಿಕ ನಡಿಗೆಯ ಅನುಭವವನ್ನು ಮೈಸೂರು ಅರಮನೆಯ ಆವರಣದಲ್ಲಿ ಪರಿಚಯಿಸಲಿದೆ.

ದಸರಾ ಸಾಂಸ್ಕೃತಿಕ ವೈಭವ ವನ್ನು ಪ್ರತಿಬಿಂಬಿಸುವ ಅರಮನೆ ಮುಂಭಾಗದಲ್ಲಿ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಗೋಲ್ಡ್ ಪಾಸ್ ಸೌಲಭ್ಯದೊಂದಿಗೆ ವೀಕ್ಷಿಸಲು ಅನುವು ಮಾಡಿಕೊಡಲಾಗುವುದು. ಮನಸೂರೆಗೊಳ್ಳುವ ಸಾಂಸ್ಕೃತಿಕ ಸಿರಿಯನ್ನು ಕಣ್ತುಂಬಿಕೊಂಡ ನಂತರ ಅತಿಥಿಗಳನ್ನು ವಾಪಸ್ಸು ಸುವರ್ಣ ರಥಕ್ಕೆ ಕೊಂಡೊಯ್ಯಲಾಗುವುದು. ರಾತ್ರಿಯ ವಿಶೇಷ ಭೋಜನವನ್ನು ರೈಲಿನಲ್ಲಿ ಮುಗಿಸಿ ಬೆಂಗಳೂರಿನ ಕಡೆ ಪ್ರಯಾಣ ಬೆಳೆಸಿ ಮರುದಿನ ಬೆಳಿಗ್ಗೆ ಬೆಂಗಳೂರಿನ ಯಶವಂತಪುರ ರೈಲ್ವೆ ನಿಲ್ದಾಣಕ್ಕೆ ಹಿಂದಿರುಗಿ ಕರೆತರಲಾಗುವುದು.

ಬಾಬು:ಜಿಪಿಆರ್.

## ಕಡಿಮೆ ಬೆಲೆಗೆ ಹೆಸರುಕಾಳು ಮಾರಾಟ ಬೇಡ

ಬೆಂಗಳೂರು ಸೆಪ್ಟೆಂಬರ್ 6 (ಕರ್ನಾಟಕ ವಾರ್ತೆ)

ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಬೆಲೆ ಕುಸಿದಾಗ ಬೆಲೆಗಳ ಸ್ಥಿರೀಕರಣಕ್ಕಾಗಿ ಬೆಂಬಲ ಬೆಲೆಯನ್ನು ನಿಗಧಿಪಡಿಸುವ ಸಚಿವ ಸಂಪುಟದ ಉಪ ಸಮಿತಿಯ ಸಭೆಯನ್ನು ಆಗಸ್ಟ್ 23 ರಂದು ನಡೆಸಲಾಯಿತು. ಈ ಸಭೆಯಲ್ಲಿ ಉದ್ದು ಮತ್ತು ಹೆಸರು ಬೆಳೆಗಳ ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಲಾಗಿದ್ದು, ಮಾರುಕಟ್ಟೆಗೆ ಬರುವ ಉತ್ಪನ್ನದ ಪ್ರಮಾಣದ ಬಗ್ಗೆಯೂ ಸಹ ಚರ್ಚಿಸಲಾಯಿತು.

ಸಚಿವ ಸಂಪುಟದ ಉಪ ಸಮಿತಿಯ ಸಭೆಯಲ್ಲಿ ಸರ್ಕಾರದಿಂದ ಹೆಸರು ಕಾಳಿಗೆ ಕ್ವಿಂಟಾಲ್ ರೂ. 5225/- ಬೆಂಬಲ ನೀಡಿ ರೈತರಿಂದ ನೇರವಾಗಿ ಖರೀದಿಸುವ ಮುಖಾಂತರ ರೈತರ ನೆರವಿಗೆ ಬರಲು ತೀರ್ಮಾನಿಸಿದೆ. ಈ ರೀತಿ ಬೆಂಬಲ ಬೆಲೆ ನೀಡಿ ಖರೀದಿಸಲು ಕೇಂದ್ರ ಸರ್ಕಾರದೊಡನೆ ಪತ್ರ ವ್ಯವಹಾರ ನಡೆಸಿ ಅನುಮತಿ ಪಡೆಯಲಾಗಿದ್ದು, ಸದ್ಯದಲ್ಲಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು.

ಆದ್ದರಿಂದ ರೈತರು ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಹೆಸರು ಕಾಳನ್ನು ಮಾರಾಟ ಮಾಡಬಾರದೆಂದು ಮನವಿ ಮಾಡಲಾಗಿದೆ ಎಂದು ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಬಾಬು:ಜಿಪಿಆರ್.

# ಕರ್ನಾಟಕ ಕೃಷಿ ಬೆಲೆ ಆಯೋಗದಲ್ಲಿ ಸಿಬ್ಬಂದಿ ನೇಮಕ

ಬೆಂಗಳೂರು ಸೆಪ್ಟೆಂಬರ್ 6 (ಕರ್ನಾಟಕ ವಾರ್ತೆ)

ಕೃಷಿ ಬೆಲೆ ಆಯೋಗಕ್ಕೆ ಅಗತ್ಯವಿರುವ ಒಂದು ತಾಂತ್ರಿಕ ಸಲಹೆಗಾರರ ಹುದ್ದೆಯನ್ನು ಒಪ್ಪಂದದ ಆಧಾರದ ಮೇಲೆ ತೆಗೆದುಕೊಳ್ಳಲು ಷರತ್ತಿಗೆ ಒಳಪಟ್ಟು ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ಸೆಪ್ಟೆಂಬರ್ 20 ರೊಳಗಾಗಿ ಸೀಲು ಮಾಡಿದ ಲಕೋಟೆಯಲ್ಲಿ ಮುದ್ದಾಂ/ನೋಂದಣಿ ಅಂಚೆ ಮೂಲಕ ಸಲ್ಲಿಸುವುದು. ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗೆ ಕೃಷಿ ಇಲಾಖಾ website http://raitamitra.kar.nic.in ನಲ್ಲಿ ಮಾಹಿತಿ ಪಡೆಯಬಹುದು. ಅರ್ಜಿಗಳನ್ನು Website ನಿಂದ Download ಮಾಡಿಕೊಂಡು ಭರ್ತಿಮಾಡಿದ ಅರ್ಜಿಯನ್ನು ಸೆಪ್ಟೆಂಬರ್ 20 ರಂದು ಸಂಜೆ 5–00 ಗಂಟೆ ಒಳಗಾಗಿ ಕರ್ನಾಟಕ ಕೃಷಿ ಬೆಲೆ ಆಯೋಗದ ಕಚೇರಿ, ಕೃಷಿ ಇಲಾಖಾ ಆವರಣ, ಶೇಷಾದ್ರಿ ರಸ್ತೆ, ಬೆಂಗಳೂರುರವರಿಗೆ ತಲುಪಿಸುವುದು. ಲಕೋಟೆ ಮೇಲೆ ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರನ್ನು ಕೆಂಪು ಶಾಯಿಯಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಕೃಷಿ ಬೆಲೆ ಆಯೋಗದ ಕಚೇರಿಯನ್ನು (ದೂರವಾಣಿ ಸಂಖ್ಯೆ 080–22074118) ಸಂಪರ್ಕಿಸುವುದು.

ಬಾಬು:ಜಿಪಿಆರ್